ಕರಡು

# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್–1042/2016/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 05/01/2018

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ ಕೇಶವ ಕೋಟ್ಯಾನ್ ಬಿನ್ ಲೇಟ್ ಕೃಷ್ಣ ಮರಕಾಲ, ಮೂಡುಪೆರಂಪಳ್ಳಿ, ಶಿವಳ್ಳಿ ಗ್ರಾಮ, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*–*–*

1. ಶ್ರೀ ಕೇಶವ ಕೋಟ್ಯಾನ್ ಬಿನ್ ಲೇಟ್ ಕೃಷ್ಣ ಮರಕಾಲ, ಮೂಡುಪೆರಂಪಳ್ಳಿ, ಶಿವಳ್ಳಿ ಗ್ರಾಮ, ಉಡುಪಿ ತಾಲ್ಲೂಕು, ಉಡುಪಿ ಜಿಲ್ಲೆ ಇವರು (1) ಶ್ರೀ ನಿರಂಜನ್, ಹಿಂದಿನ ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಉಡುಪಿ (2) ಶ್ರೀಮತಿ ಲತಾ ಕುಲಕರ್ಣಿ, ಕಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಉಡುಪಿ (3) ಶ್ರೀ ಕೋದಂಡ ರಾಮಯ್ಯ, ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಉಡುಪಿ (4) ಶ್ರೀ ಮಹೇಶ್ ಪ್ರಸಾದ್, ಕಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಉಡುಪಿ ರವರ ವಿರುದ್ಧ ಉಡುಪಿ ತಾಲ್ಲೂಕು, ಶಿವಳ್ಳಿ ಗ್ರಾಮದ ಸರ್ವೇ ನಂಬರ್ 280/12ಪಿ2, 277/4, 278/3, 277/28ಪಿ3, 277/19ಪಿ4, 337/1ಪಿ2, 337/1ಪಿ3 ಮತ್ತು 277/19ಪಿ5 ಮತ್ತು 325ರ ಸ್ಥಳವು ವಿವಾದಿತ ಸ್ಥಳವಾಗಿದ್ದು, ಸದರಿ ಸ್ಥಳದಲ್ಲಿ ಅಕ್ರಮ ಮರಳುಗಾರಿಕೆ ನಡೆಸುತ್ತಿರುವ ಬಗ್ಗೆ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಸಂಬಂಧಿಸಿದ ಇಲಾಖೆಗಳಿಗೆ ಮನವಿ ಮಾಡಿದರೂ ಸಹಾ ಯಾವುದೇ ಕ್ರಮ ಜರುಗಿಸದೆ ಇರುವ ಬಗ್ಗೆ ದೂರು ಸಲ್ಲಿಸಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ಸರ್ವೇ ನಂಬರ್‌ಗಳ ಜಮೀನುಗಳು ದೂರುದಾರರ ಕುಟುಂಬದ ಸ್ಥಿರಾಸ್ತಿಗಳಾಗಿದ್ದು, ಸದರಿ ಜಮೀನುಗಳ ಬಗ್ಗೆ ಉಡುಪಿ ಸಿವಿಲ್ ನ್ಯಾಯಾಲಯದಲ್ಲಿ ಆಸ್ತಿ ವಿಭಾಗ ಕೋರಿ ಸಲ್ಲಿಸಿದ ದಾವಾ ಇತ್ಯರ್ಥಕ್ಕೆ ಬಾಕಿ ಇರುತ್ತದೆ. ದಾವಾ ಸಂಖ್ಯೆ: 426/2010–11 ಇದ್ದರೂ ಕೂಡ ಜಯ ಸಾಲ್ಯಾನ್ ಮತ್ತು

ಗೋಪಾಲಕೃಷ್ಣ ಎಂಬುವರು ಸಂಬಂಧಿಸಿದ ವಿವಾದಿತ ಸ್ಥಳದಲ್ಲಿ ಗ್ರಾಮ ಪಂಚಾಯತ್‌ಗಳಿಗೆ ಮತ್ತು ಭೂವಿಜ್ಞಾನ ಇಲಾಖೆ ಹಾಗೂ ಕಂದಾಯ ಇಲಾಖೆಯಿಂದ ನಿರಾಕ್ಷೇಪಾ ಪತ್ರ ಪಡೆದುಕೊಳ್ಳದೇ ಅಕ್ರಮವಾಗಿ ಹಾಗೂ ಕಾನೂನುಬಾಹಿರವಾಗಿ ಮರಳು ತೆಗೆಯುತ್ತಿದ್ದುದಲ್ಲದೇ ಅನಧಿಕೃತವಾಗಿ ತಾತ್ಕಾಲಿಕ ರಸ್ತೆಯನ್ನು ನಿರ್ಮಿಸಿಕೊಂಡು ಮರಳನ್ನು ಸಾಗಿಸುತ್ತಿದ್ದಾರೆ. ಸದರಿ ರಸ್ತೆಯಲ್ಲಿ ಘನ ವಾಹನಗಳು ಸಂಚಾರ ಮಾಡುತ್ತಿರುವುದರಿಂದ ರಸ್ತೆಯು ಸಂಪೂರ್ಣ ಹದಗೆಟ್ಟು ಶಾಲೆಗೆ ಹೋಗುವ ಮಕ್ಕಳಿಗೆ, ವೃದ್ದರಿಗೆ ಹಾಗೂ ಜನಸಾಮಾನ್ಯರಿಗೆ ತಿರುಗಾಡುವುದು ತುಂಬಾ ದುಸ್ತರವಾಗಿದೆ. ಈ ಬಗ್ಗೆ ಸದರಿ ಅಕ್ರಮ ಮರಳುಗಾರಿಕೆಯನ್ನು ನಿಲ್ಲಿಸಲು ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳಿಗೆ ಸಾಕಷ್ಟು ಬಾರಿ ಮನವಿ ಮಾಡಿಕೊಂಡರೂ ಸಹ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಹಿರಿಯ ಭೂವಿಜ್ಞಾನಿ, ಉಡುಪಿ ಜಿಲ್ಲೆ ಇವರು ಶಿವಳ್ಳಿ ಗ್ರಾಮದ ಸ.ನಂ. 310ರ ಸ್ವರ್ಣ ನದಿ ಪಾತ್ರದಲ್ಲಿ ಮರಳನ್ನು ತೆಗೆಯಲು 2013–14ನೇ ಸಾಲಿನ ತಾತ್ಕಾಲಿಕ ಪರವಾನಿಗೆಯನ್ನು ನೀಡಿರುತ್ತಾರೆ. ಮರಳುಗಾರಿಕೆ ನಿಷೇಧಿಸುವ ಬಗ್ಗೆ ತಾರೀಖು 31/01/2014 ರಂದು ಮಾನ್ಯ ಜಿಲ್ಲಾಧಿಕಾರಿಯವರ ಕಛೇರಿಗೆ ಮನವಿಯನ್ನು ಸಲ್ಲಿಸಿದ್ದು, ಸದರಿ ಸ್ಥಳಗಳಲ್ಲಿ ಅಕ್ರಮ ಮರಳುಗಾರಿಕೆ ಮಾಡುತ್ತಿರುವುದರಿಂದ ಶ್ರೀ ಸೋದೆ ವಾದಿರಾಜ ಮಠ ದೇವಸ್ಥಾನ ಸುವರ್ಣ ನದಿಯ ಪಕ್ಕದಲ್ಲೇ ಇದೆ. ಸದರಿ ಮಠವು ಪೌರಾಣಿಕ ಹಿನ್ನೆಲೆ ಹೊಂದಿರುತ್ತದೆ. ಮರಳುಗಾರಿಕೆ ಲಾರಿಯ ಹಿಂದೆ ಮುಂದಿನ ಚಾಲನೆಯಿಂದಾಗಿ ದೇವಸ್ಥಾನದ ಬಾವಿಯ ಮಾಡಿನ ಕಂಬವೊಂದಕ್ಕೆ ಹಾನಿ ಆಗಿರುತ್ತದೆ ಎಂದು ನಮೂದಿಸಿರುತ್ತಾರೆ.

3. ಜಿಲ್ಲಾಧಿಕಾರಿಗಳು, ಉಡುಪಿ ಇವರಿಗೆ ದೂರು ಸಲ್ಲಿಸಿದ್ದು, ಜಿಲ್ಲಾಧಿಕಾರಿಗಳು, ಉಡುಪಿ ತಹಶೀಲ್ದಾರ್‌ರಿಗೆ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

4. ತಹಶೀಲ್ದಾರ್‌ರವರು ಸ್ಥಳ ಪರಿಶೀಲಿಸಿ ಸದರಿ ಪ್ರದೇಶದಲ್ಲಿ ಯಾರಿಗೂ ಮರಳುಗಾರಿಕೆಗೆ ಅನುಮತಿ ನೀಡಬಾರದಾಗಿ ಹಿರಿಯ ಭೂವಿಜ್ಞಾನಿಗಳು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಖನಿಜ ಇವರಿಗೆ ಸೂಚಿಸಿರುತ್ತಾರೆ.

5. ಇಷ್ಟೆಲ್ಲಾ ಘಟನೆಗಳು ಘಟಿಸಿದರೂ ಹಿರಿಯ ಹಾಗೂ ಕಿರಿಯ ಭೂವಿಜ್ಞಾನಿಗಳು ಅಕ್ರಮ ಮರಳುಗಾರಿಕೆ ತಡೆಗಟ್ಟುವ ವಿರುದ್ಧ ಯಾವುದೇ ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳದೆ ಅಕ್ರಮ ಮರಳುಗಾರಿಕೆಗೆ ಪರೋಕ್ಷ ಬೆಂಬಲ ನೀಡಿದ್ದು, ಅಕ್ರಮ ಮರಳುಗಾರಿಕೆ ಈಗಲೂ ಅವ್ಯಾಹತವಾಗಿ ನಡೆಯುತ್ತಲೇ ಇದೆ, ಅಕ್ರಮ ಮರಳುಗಾರಿಕೆಯನ್ನು ಶಾಶ್ವತವಾಗಿ ನಿಲುಗಡೆ ಮಾಡಲು ಆದೇಶ

ಮಾಡಬೇಕಾಗಿ ಕೋರಿರುತ್ತಾರೆ. ದೂರಿನೊಂದಿಗೆ ಜಿಲ್ಲಾಧಿಕಾರಿಗಳಿಗೆ, ತಹಶೀಲ್ದಾರ್‌ರಿಗೆ, ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಕೊಟ್ಟ ಮನವಿ ಪತ್ರಗಳ ಪ್ರತಿಯನ್ನು ಲಗತ್ತಿಸಿರುತ್ತಾರೆ.

6. OS 426/10 ದಾವೆಯ ವಾದ ಪತ್ರ ಲಗತ್ತಿಸಿದ್ದು, ವಿಭಾಗ ಕೋರಿ 75 ಜನ ಪ್ರತಿವಾದಿಗಳ ವಿರುದ್ಧ ಸಲ್ಲಿಸಿದ ದಾವೆಯಾಗಿರುತ್ತದೆ.

7. ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆಯವರು ದೂರಿನ ಆರೋಪಕ್ಕೆ ಸಂಬಂಧಪಟ್ಟಂತೆ ದಿನಾಂಕ 27/11/2014 ರಂದು ತಮ್ಮ ವರದಿಯಲ್ಲಿ *"ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ ದಿನಾಂಕ 06/01/2011ರ ಅಧಿಸೂಚನೆಯಂತೆ ಉಡುಪಿ ಜಿಲ್ಲೆಯ CRZ ವ್ಯಾಪ್ತಿಗೊಳಪಡುವ ಪ್ರದೇಶಗಳಲ್ಲಿ ಮರಳು ಗಣಿಗಾರಿಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿತ್ತು.*

*ಉಡುಪಿ ಜಿಲ್ಲೆಯ ಮರಳು ದೋಣಿ ಕಾರ್ಮಿಕರ ಸಂಘದವರು ದಿನಾಂಕ 28/11/2006 ರಂದು ಪ್ರಾದೇಶಿಕ ನಿರ್ದೇಶಕರು (ಪರಿಸರ) ಉಡುಪಿ ಇವರಿಗೆ ಬರೆದ ಅರ್ಜಿಯಲ್ಲಿ ಜಿಲ್ಲೆಯಲ್ಲಿ ಮರಳಿನ ಬೇಡಿಕೆ ತುಂಬಾ ಹೆಚ್ಚಿನ ಪ್ರಮಾಣದಲ್ಲಿದ್ದು, ಕಟ್ಟಡ ಕಟ್ಟುವುದಕ್ಕೆ, ರಸ್ತೆ ನಿರ್ಮಾಣಕ್ಕೆ ಮರಳನ್ನು ಉಪಯೋಗಿಸುತ್ತಾರೆ. ಮರಳುಗಾರಿಕೆಯನ್ನು ನಿಲ್ಲಿಸಿದಲ್ಲಿ, ಈ ಬೇಡಿಕೆಯನ್ನು ಇತರ ಪ್ರದೇಶದಿಂದ ತುಂಬುವುದಕ್ಕೆ ಕಷ್ಟವಾಗುತ್ತದೆ. ಹೊಳೆಯಲ್ಲಿ ಮರಳು ತುಂಬುವುದು ಸ್ವಾಭಾವಿಕ ಪ್ರಕ್ರಿಯೆಯಾಗಿರುತ್ತದೆ. ಸದರಿ ಮರಳನ್ನು ತೆಗೆಯದಿದ್ದಲ್ಲಿ ಹೊಳೆಯು ತುಂಬಿ ಪ್ರವಾಹ ಉಂಟಾಗುವ ಸಂಭವ ಇರುತ್ತದೆ. ಆದ್ದರಿಂದ, ಕರಾವಳಿ ನಿಯಂತ್ರಣ ವಲಯದಲ್ಲಿ ಮರಳು ತೆಗೆಯುವುದಕ್ಕೆ ವಿನಾಯಿತಿ ನೀಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ.*

*ದಿನಾಂಕ 02/04/2007 ರಂದು ಉಡುಪಿ ಜಿಲ್ಲಾಧಿಕಾರಿಗಳು, ಸರ್ಕಾರದ ಕಾರ್ಯದರ್ಶಿಗಳು ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಇವರಿಗೆ ಬರೆದ ಪತ್ರದಲ್ಲಿ ಹರಿಯುವ ನದಿಗಳಲ್ಲಿ ಸಂಗ್ರಹವಾಗುವ ಮರಳು ತೆಗೆಯುವುದನ್ನು ನಿಷೇಧಿಸಿದರೆ, ಪ್ರತಿ ವರ್ಷ ಮರಳಿನ ಸಂಗ್ರಹ ಹೆಚ್ಚಾಗಿ ಅಕ್ಕಪಕ್ಕದ ಕೃಷಿ ಭೂಮಿಗಳಲ್ಲಿ ಹಾಗೂ ಬಂದರು ಪ್ರದೇಶದಲ್ಲಿ ಹೂಳು ತುಂಬಿ ಕೃಷಿ ಹಾಗೂ ದೋಣಿ ಸಂಚಾರಕ್ಕೆ ತೊಂದರೆಯುಂಟಾಗಿರುತ್ತದೆ ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಹರಿಯುವ ನದಿಗಳಲ್ಲಿ ಸಾಮಾನ್ಯ ಮರಳನ್ನು ತೆಗೆಯುವುದನ್ನು ಪ್ರೋತ್ಸಾಹಿಸಿದರೆ ಸರ್ಕಾರಕ್ಕೆ ಹೆಚ್ಚಿನ ರಾಜಧನ ಸಂಗ್ರಹವಾಗುವುದಲ್ಲದೆ ನೂರಾರು ವರ್ಷಗಳಿಂದ ಮರಳು ತೆಗೆಯುವುದನ್ನೇ ಜೀವನೋಪಾಯಕ್ಕಾಗಿ ಮಾಡಿಕೊಂಡಿರುವ ಸಾವಿರಾರು ಕುಟುಂಬಗಳ ಜೀವನ ನಿರ್ವಹಣೆಯಾಗುವುದಲ್ಲದೇ, ಕಡಲ ಕೊರೆತ, ನದಿ ಪಾತ್ರ*

ಅಗಲವಾಗುವುದು ಮುಂತಾದ ನೈಸರ್ಗಿಕ ಅನಾಹುತಗಳನ್ನು ತಪ್ಪಿಸಬಹುದಾಗಿದೆ. ಆದ್ದರಿಂದ, ಸಿ.ಆರ್.ಝಡ್ ನಿಯಮವನ್ನು ಸರಳೀಕರಣಗೊಳಿಸಿ ಅವಶ್ಯಕ ತಿದ್ದುಪಡಿ ತಂದು ದೋಣಿ ಮೂಲಕ ಮಾನವ ಸಂಪನ್ಮೂಲವನ್ನು ಉಪಯೋಗಿಸಿ ಪರಿಸರಕ್ಕೆ ಹಾನಿಯಾಗದೆ ಇರುವ ರೀತಿಯಲ್ಲಿ ಮರಳು ತೆಗೆಯುವ ಬಡ ಕೂಲಿ ಕಾರ್ಮಿಕರಿಗೆ ಅನುಕೂಲವಾಗುವಂತೆ ಮಾಡಬೇಕೆಂದು ತಿಳಿಸಿರುತ್ತಾರೆ. ಸದರಿ ಮನವಿಗೆ ರಾಜ್ಯ ಸರ್ಕಾರವು ಸ್ಪಂದಿಸಿ, ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯಕ್ಕೆ ಮೇಲ್ಕಂಡ ಮನವಿಗಳನ್ನು ಕಳುಹಿಸಿಕೊಡಲಾಗಿ, 08/11/2011 ರಂದು ಕೇಂದ್ರ ಸರ್ಕಾರ ಕಛೇರಿ ಆದೇಶವನ್ನು ಹೊರಡಿಸಿ, CRZ ವ್ಯಾಪ್ತಿಗೊಳಪಡುವ ಪ್ರದೇಶಗಳಲ್ಲಿ ಮರಳು ತೆಗೆಯುವುದಕ್ಕೆ ಪ್ರತ್ಯೇಕ ಮಾರ್ಗಸೂಚಿಯನ್ನು ರೂಪಿಸಿ, ಮರಳು ತೆಗೆಯುವುದಕ್ಕೆ ಅವಕಾಶ ಕಲ್ಪಿಸಿಕೊಡಲಾಗಿರುತ್ತದೆ.

ಕರ್ನಾಟಕ ಹೊಸ ಮರಳು ನೀತಿ 2011 ರಂತೆ ಮತ್ತು ದಿನಾಂಕ 08/11/2011ರ ಕೇಂದ್ರ ಪರಿಸರ ಮತ್ತು ಅರಣ್ಯ ಮಂತ್ರಾಲಯದ ಆದೇಶದಂತೆ ಕರಾವಳಿ ನಿಯಂತ್ರಣ ವ್ಯಾಪ್ತಿಯಲ್ಲಿ, ಮಾನವ ಶಕ್ತಿಯ ಮೂಲಕ ಮರಳು ತೆಗೆಯುವವರನ್ನು ಗುರುತಿಸಿ ನಂತರ National Institute of Technology, Karnataka, Surathkal, Mangalore ಸಂಸ್ಥೆಯ ತಜ್ಞರು ಶಿಫಾರಸ್ಸು ಮಾಡಿರುವ ಮರಳು ದಿಬ್ಬಗಳನ್ನು ತೆಗೆಯಲು ಜಿಲ್ಲಾಡಳಿತವು ಅನುಮತಿ ನೀಡಲಾಗುತ್ತಿತ್ತು.

ಉಡುಪಿ ತಾಲ್ಲೂಕು ಶಿವಳ್ಳಿ ಗ್ರಾಮದ ಸರ್ವೆ ನಂ. 310ರ ಸ್ವರ್ಣ ನದಿ ಪಾತ್ರದಲ್ಲಿ ಶ್ರೀ ಗೋಪಾಲ್ ಕೃಷ್ಣ ಮತ್ತು ಶ್ರೀ ಜಯಕುಮಾರ್ ಇವರಿಗೆ ಮರಳನ್ನು ತೆಗೆಯಲು 2013–14ನೇ ಸಾಲಿನಲ್ಲಿ ತಾತ್ಕಾಲಿಕ ಪರವಾನಿಗೆಯನ್ನು ನೀಡಲಾಗಿತ್ತು. ಸದರಿ ಪ್ರದೇಶವು ಕರಾವಳಿ ನಿಯಂತ್ರಣ ವಲಯ (CRZ) ಪ್ರದೇಶಕ್ಕೆ ಒಳಪಡುತ್ತದೆ. ಶ್ರೀ ಕೇಶವ ಕೋಟ್ಯಾನ್, ಶಿವಳ್ಳಿ ಗ್ರಾಮ, ಉಡುಪಿ ತಾಲ್ಲೂಕು ರವರು ಮರಳುಗಾರಿಕೆ ನಿಷೇಧಿಸುವ ಬಗ್ಗೆ 31/01/2014 ರಂದು ಮಾನ್ಯ ಜಿಲ್ಲಾಧಿಕಾರಿಯವರ ಕಛೇರಿಗೆ ದೂರನ್ನು ಸಲ್ಲಿಸಿರುತ್ತಾರೆ. ಸದರಿ ದೂರಿಗೆ ಸಂಬಂಧಿಸಿದಂತೆ ದಿನಾಂಕ 17/02/2014 ರಂದು ಸಾರ್ವಜನಿಕರು, ಕೌನ್ಸಿಲರ್‌ರವರು, ಈ ಕಛೇರಿಯ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಲಾಯಿತು. ಸ್ಥಳ ತನಿಖೆ ಸಮಯದಲ್ಲಿ ಹಾಜರಿದ್ದ ಸಾರ್ವಜನಿಕರು ಸದರಿ ಪ್ರದೇಶದಲ್ಲಿ ಮರಳುಗಾರಿಕೆಯು ಬಹಳ ಹಿಂದಿನ ವರ್ಷಗಳಿಂದಲೂ ನಡೆದುಕೊಂಡು ಬರುತ್ತಿದೆ. ಈ ಪ್ರದೇಶದಲ್ಲಿ ಮರಳನ್ನು ತೆಗೆಯುವುದಕ್ಕೆ ನಮ್ಮಿಂದ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲ. ಮರಳು ತೆಗೆಯುವುದರಿಂದ ನದಿ ನೀರು ಸುಗಮವಾಗಿ ಹರಿಯುತ್ತದೆ. ಮಳೆಗಾಲದಲ್ಲಿ ನೆರೆ ಹಾವಳಿ ಕಡಿಮೆಯಾಗಿದೆ. ಮರಳು ಸಾಗಾಣಿಕೆ ಮಾಡುವುದರಿಂದ ರಸ್ತೆ ಸಮಸ್ಯೆಯು ಇರುವುದಿಲ್ಲ. ಇಲ್ಲಿರುವ

ದೇವಸ್ಥಾನವು ಬೆಳಗ್ಗೆ 7 ರಿಂದ 9 ಗಂಟೆಯವರೆಗೆ ಮಾತ್ರ ತೆಗೆದಿರುತ್ತದೆ. ಇದರಿಂದ ಯಾವುದೇ ತೊಂದರೆ ಆಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಕೃಷಿ ಭೂಮಿಯ ಹತ್ತಿರ ಮರಳನ್ನು ತೆಗೆಯುವುದು ಬೇಡವೆಂದು ತಿಳಿಸಿರುತ್ತಾರೆ.

ಸದರಿ ಪ್ರದೇಶದಲ್ಲಿ ಮರಳುಗಾರಿಕೆ ಸ್ಥಗಿತಗೊಳಿಸಬೇಕೆಂದು ನೀಡಿರುವ ದೂರಿಗೆ ಸಂಬಂಧಿಸಿದಂತೆ ದಿನಾಂಕ 30/10/2014 ರಂದು ಈ ಕಛೇರಿಯ ಭೂವಿಜ್ಞಾನಿಯವರು ಸ್ಥಳ ಪರಿಶೀಲನೆ ಮಾಡಿರುತ್ತಾರೆ. ಸ್ಥಳ ಪರಿಶೀಲನಾ ಸಮಯದಲ್ಲಿ ಮರಳುಗಾರಿಕೆ ಮತ್ತು ಸಾಗಾಣಿಕೆಯು ಸಂಪೂರ್ಣವಾಗಿ ಸ್ಥಗಿತಗೊಂಡಿರುತ್ತದೆ. ಈ ಹಿಂದೆ ಸದರಿ ಪ್ರದೇಶದಲ್ಲಿ ಮರಳುಗಾರಿಕೆ ಮಾಡುತ್ತಿದ್ದ ಶ್ರೀ ಜಯಕುಮಾರ್‌ರವರನ್ನು ವಿಚಾರಿಸಲಾಗಿ ಸುಮಾರು ನಾಲ್ಕು ತಿಂಗಳ ಹಿಂದೆ ಮರಳುಗಾರಿಕೆಯನ್ನು ಸ್ಥಗಿತಗೊಳಿಸಿರುವುದಾಗಿ ತಿಳಿಸಿರುತ್ತಾರೆ. ಪ್ರಸ್ತುತ ಸದರಿ ಪ್ರದೇಶದಲ್ಲಿ ಮರಳನ್ನು ತೆಗೆಯುವುದಕ್ಕೆ ಯಾರಿಗೂ ಪರವಾನಿಗೆಯನ್ನು ನೀಡಿರುವುದಿಲ್ಲ ಹಾಗೂ ಸದರಿ ಪ್ರದೇಶದಲ್ಲಿ ಯಾವುದೇ ಮರಳುಗಾರಿಕೆ ಅಥವಾ ಸಾಗಾಣಿಕೆ ನಡೆಯುತ್ತಿರುವುದಿಲ್ಲ. ಆದುದರಿಂದ, ಶ್ರೀ ಕೇಶವ ಕೋಟ್ಯಾನ್ ರವರ ದೂರು ಕುರಿತ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು" ಕೋರಿರುತ್ತಾರೆ.

8. ಸದರಿ ವರದಿಗೆ ಫಿರ್ಯಾದುದಾರರು ಪ್ರತ್ಯುತ್ತರ ಸಲ್ಲಿಸಿದ್ದು, "ಎದುರುದಾರರು ಅಕ್ರಮ ಮರಳುಗಾರಿಕೆಗೆ ಪರೋಕ್ಷ ಬೆಂಬಲ ನೀಡಿದ್ದು, ಅಕ್ರಮ ಮರಳುಗಾರಿಕೆ ಈಗಲೂ ಅವ್ಯಾಹತವಾಗಿ ಎಗ್ಗಿಲ್ಲದೆ ನಡೆಯುತ್ತಲೇ ಇದೆ ಎಂಬುದನ್ನು ಈ ಮೂಲಕ ಮರು ಉತ್ತರ ಸಲ್ಲಿಸಲಾಗುತ್ತದೆ. ಅಕ್ರಮ ಮರಳುಗಾರಿಕೆಯನ್ನು ಶಾಶ್ವತವಾಗಿ ನಿಲುಗಡೆಗೊಳಿಸಲು ಕೋರಿರುತ್ತಾರೆ".

9. ಉಡುಪಿ ಜಿಲ್ಲೆಯ ಪೊಲೀಸ್ ಉಪಾಧೀಕ್ಷಕರು ಸ್ಥಳಕ್ಕೆ ಭೇಟಿ ನೀಡಿ ದೂರಿನ ಅಂಶಗಳ ಬಗ್ಗೆ ತನಿಖೆ ನಡೆಸಿ ದಿ: 19/04/2017 ರಂದು ವರದಿ ಸಲ್ಲಿಸಿದ್ದು, "ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿದಲ್ಲಿ ಸದರಿ ಸ್ಥಳದಲ್ಲಿ ಇತ್ತೀಚೆಗೆ ಯಾವುದೇ ಮರಳುಗಾರಿಕೆ ನಡೆಸಿದ್ದಾಗಲಿ, ಮರಳು ಶೇಖರಣೆ ಮಾಡಿದ್ದಾಗಲಿ ಕಂಡು ಬಂದಿರುವುದಿಲ್ಲ. ದೂರು ಅರ್ಜಿಗೆ ಸಂಬಂಧಿಸಿದಂತೆ ಸ್ಥಳದಲ್ಲಿ ಹಾಜರಿದ್ದ ಅರ್ಜಿದಾರರಲ್ಲಿ ವಿಚಾರಿಸಿ ಹೇಳಿಕೆಯನ್ನು ಪಡೆದುಕೊಂಡಿದ್ದು, 2016ನೇ ಮೇ ತಿಂಗಳಿನ ನಂತರ ನ್ಯಾಯಾಲಯವು ಸಿ.ಆರ್.ಝಡ್ ವ್ಯಾಪ್ತಿಯಲ್ಲಿ ಬರುವ ನದಿಗಳ ದಡದಲ್ಲಿ ಮರಳುಗಾರಿಕೆ ನಡೆಸುವುದನ್ನು ನಿಷೇಧಿಸಿ ಆದೇಶ ಮಾಡಿದ್ದು, ನ್ಯಾಯಾಲಯದ ಈ ಆದೇಶದ ಬಳಿಕ ದೂರು ಅರ್ಜಿಯಲ್ಲಿ ತಿಳಿಸಿದ ನಮ್ಮ ಕುಟುಂಬದ ವಿವಾದಿತ ಸ್ಥಳಗಳಲ್ಲಿ ನಡೆಯುತ್ತಿದ್ದ ಮರಳುಗಾರಿಕೆ ಸಂಪೂರ್ಣ ನಿಂತಿರುತ್ತದೆ. ಪ್ರಸ್ತುತ ಮೇಲೆ ತಿಳಿಸಿದ ಸ್ಥಳದಲ್ಲಿ ಮರಳುಗಾರಿಕೆ ನಡೆಯುತ್ತಿಲ್ಲ ಎಂದು

*ಹೇಳಿರುತ್ತಾರೆ. ಅಲ್ಲಿಯ ನಿವಾಸಿಗಳಲ್ಲಿಯೂ ಸದರಿ ಸ್ಥಳದಲ್ಲಿ ಮರಳುಗಾರಿಕೆ ನಡೆಯುವ ಬಗ್ಗೆ ವಿಚಾರಣೆ ನಡೆಸಿದಲ್ಲಿಯೂ ಪ್ರಸ್ತುತ ಯಾವುದೇ ಮರಳುಗಾರಿಕೆ ನಡೆಯುವುದಿಲ್ಲವಾಗಿ ತಿಳಿಸಿರುತ್ತಾರೆ. ಒಂದು ವರ್ಷದಿಂದ ಅಂದರೆ 2016ನೇ ಮೇ ತಿಂಗಳಿನ ನಂತರ ಸದರಿ ಸ್ಥಳದಲ್ಲಿ ಮರಳುಗಾರಿಕೆ ಸಂಪೂರ್ಣ ನಿಂತಿದ್ದು, ಪ್ರಸ್ತುತ ಯಾವುದೇ ಮರಳುಗಾರಿಕೆ ನಡೆಯುತ್ತಿಲ್ಲವಾಗಿ ವರದಿ ಸಲ್ಲಿಸಿರುತ್ತಾರೆ."*

10. ಸದರಿ ತನಿಖಾ ವರದಿಗೆ ಫಿರ್ಯಾದಿಯ ಪ್ರತ್ಯುತ್ತರ ದಿನಾಂಕಕ 10/06/2017 ರಂದು ಸಲ್ಲಿಸಿದ್ದು, *"ತನಿಖಾಧಿಕಾರಿಗಳು ಸಲ್ಲಿಸಿರುವ ವರದಿ ಸುಳ್ಳಿನಿಂದ ಕೂಡಿದ್ದು ತಿರುಚಲಾಗಿದೆ. ನನ್ನ ಹೇಳಿಕೆಯಲ್ಲಿ ಬರೆದು ಕೊಂಡಿರುವ ಹೇಳಿಕೆಯಲ್ಲಿನ ಕೊನೆಯ 2 ಸಾಲಿನ ವಾಕ್ಯಗಳು ನನ್ನದಲ್ಲವಾಗಿದ್ದು ತನಿಖೆಗೆ ಬಂದ ಅಧಿಕಾರಿಗಳು ಸ್ಥಳದಲ್ಲಿ ಹೇಳಿಕೆ ಪಡೆದುಕೊಳ್ಳದೆ ತಮ್ಮ ಕಛೇರಿಗೆ ನನ್ನನ್ನು ಕರಿಸಿ ಕಛೇರಿಯಲ್ಲಿ ಸಿದ್ಧಪಡಿಸಿದ್ದ ಹೇಳಿಕೆಗೆ ನನ್ನ ಸಹಿ ಪಡೆದು ಕೊಂಡಿರುವುದಾಗಿದೆ. ಗಣಿ ಇಲಾಖೆ ಅಧಿಕಾರಿಗಳ ಸಹಕಾರದಿಂದ ನಿರಾತಂಕವಾಗಿ ಮರಳುಗಾರಿಕೆ ನಡೆಸುತ್ತಿದ್ದು ಈವರೆಗೆ ಕೋಟ್ಯಾಂತರ ರೂ.ಗಳ ರಾಜಸ್ವವನ್ನು ಸರ್ಕಾರಕ್ಕೆ ವಂಚಿಸಿದ್ದಾರೆ"* ಎಂದು ನಮೂದಿಸಿರುತ್ತಾರೆ.

11. ಫಿರ್ಯಾದುದಾರರು ನಮೂದಿಸಿರುವ ದೂರಿನ ಅಂಶಗಳಿಂದ ವಿವಿಧ ಇಲಾಖೆಗಳಿಗೆ ವಿವಿಧ ಮನವಿಗಳನ್ನು ದೂರುದಾರರು ಸಲ್ಲಿಸಿದ್ದ ಅಂಶಗಳಿಂದ ಫಿರ್ಯಾದುದಾರರು ತಮ್ಮ ಪ್ರತ್ಯುತ್ತರಗಳಲ್ಲಿ ಸಲ್ಲಿಸಿದ ಮಾಹಿತಿ ಹಾಗೂ ದಾಖಲೆಗಳಿಂದ, ಉಡುಪಿ ತಾಲ್ಲೂಕು ಶಿವಳ್ಳಿ ಗ್ರಾಮದ ಸರ್ವೆ ನಂಬರ್ 280/12ಪಿ2, 277/4, 278/3, 277/28ಪಿ3, 277/19ಪಿ4, 337/1ಪಿ2, 337/1ಪಿ3 ಮತ್ತು 277/19ಪಿ5 ಮತ್ತು 325ರ ವಿವಾದಿತ ಜಮೀನುಗಳ ಸ್ಥಳದಲ್ಲಿ ಅಕ್ರಮ ಮರಳುಗಾರಿಕೆ ನಡೆಯುತ್ತಿರುವ ಬಗ್ಗೆ ಸೂಕ್ತ ಕ್ರಮ ಜರುಗಿಸಲು ಫಿರ್ಯಾದುದಾರರು ಅನೇಕ ಮನವಿಗಳನ್ನು ಮಾಡಿರುವ ಅಂಶಗಳಿಂದ ಸಿವಿಲ್ ನ್ಯಾಯಾಲಯದಲ್ಲಿ ಸಲ್ಲಿಸಿರುವ ದಾವಾ ಅಂಶಗಳ ಮಾಹಿತಿಯಿಂದ ಸದರಿ ವಿವಾದಿತ ಜಮೀನಿನಲ್ಲಿ ಅಕ್ರಮ ಮರಳುಗಾರಿಕೆ ನಡೆಯುತ್ತಿರುವ ಬಗ್ಗೆ ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಂಡು ಬರುತ್ತದೆ. ಸದರಿ ಸ್ಥಳದಲ್ಲಿ ಅಕ್ರಮ ಗಣಿಗಾರಿಕೆ ಮಾಡದಂತೆ ಕ್ರಮ ವಹಿಸಿ ಸೂಕ್ತ ಕ್ರಮ ಜರುಗಿಸುವ ಅಗತ್ಯತೆ ಕಂಡು ಬರುತ್ತದೆ.

12. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಉಡುಪಿ ತಾಲ್ಲೂಕು ಶಿವಳ್ಳಿ ಗ್ರಾಮದ ಸರ್ವೆ ನಂಬರ್ 280/12ಪಿ2, 277/4, 278/3, 277/28ಪಿ3, 277/19ಪಿ4, 337/1ಪಿ2, 337/1ಪಿ3 ಮತ್ತು 277/19ಪಿ5 ಮತ್ತು 325ರ ವಿವಾದಿತ ಜಮೀನುಗಳ ಸ್ಥಳದಲ್ಲಿ ಅಕ್ರಮ ಮರಳುಗಾರಿಕೆ**

ನಡೆಯುತ್ತಿರುವ ಬಗ್ಗೆ ಸೂಕ್ತ ಕ್ರಮ ಜರುಗಿಸಿ ಅಕ್ರಮ ಮರಳುಗಾರಿಕೆ ನಡೆಸದಂತೆ ಕಾನೂನಿನಡಿ ಸೂಕ್ತ ಕ್ರಮ ಜರುಗಿಸಲು) ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ. ಈ ಬಗ್ಗೆ ಎರಡು ತಿಂಗಳೊಳಗೆ ಕ್ರಮ ಕೈಗೊಂಡು, ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳಯೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 5/1/18.

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.**